ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ರಜೆಗಳು ಜಾಸ್ತಿಯಾಗಿದೆ. ರಜೆ ಕೊಡುವುದು ಬೇಡ ಎಂಬುದನ್ನು ನಾನು ಒಪ್ಪುತ್ತೇನೆ. ಕಾರ್ಪೊರೇಷನ್ಸ್‌ಗೆ second Saturday ರಜೆ ಇಲ್ಲ. ಸರ್ಕಾರಕ್ಕೆ ಮಾತ್ರ ರಜೆ ಇದೆ. ಅದು ಏಕೆ? ಅದನ್ನೂ ವಜಾ ಮಾಡಿ.

ಶ್ರೀ ಎಸ್. ಸುರೇಶ್ ಕುಮಾರ್: ಸರ್ಕಾರಕ್ಕೆ ರಜೆಯನ್ನು ವಜಾ ಮಾಡಿ ಎನ್ನುತ್ತೀರೋ? ಕಾರ್ಪೊರೇಷನ್‌ಗೆ ವಜಾ ಮಾಡಿ ಎನ್ನುತ್ತೀರೋ?

ಶ್ರೀ ಟಿ.ಬಿ. ಜಯಚಂದ್ರ: ಅಲ್ಲ. Second Saturdayಗೆ ರಜೆ ಕೊಡುವುದು ಬೇಡ. Working day ಮಾಡಿ ಎಂದು ಹೇಳುತ್ತಿರುವುದು.

ಶ್ರೀ ಎಸ್. ಸುರೇಶ್ ಕುಮಾರ್: ಪರಿಶೀಲಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ದಯಮಾಡಿ ಮಾಡಿ.

ತುರುವೇಕೆರೆ ಪಟ್ಟಣದಲ್ಲಿ ಸಬ್‌ಟಿಕ್ ಟ್ಯಾಂಕ್ ನಿರ್ಮಿಸುವುದು

96(463) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ಪಟ್ಟಣದಲ್ಲಿ ಒಳಚರಂಡಿ ಮಂಜೂರಾಗಿದ್ದು, ಸಬ್‌ಟಿಕ್ ಟ್ಯಾಂಕ್ ನಿರ್ಮಿಸಲು ಜಮೀನನ್ನು ಸ್ವಾಧೀನಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಟ್ಯಾಂಕ್ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು)

ಅ) ತುರುವೇಕೆರೆ ಪಟ್ಟಣದಲ್ಲಿ ಕೈಗೊಂಡಿರುವ ಒಳಚರಂಡಿ ಯೋಜನೆಯಡಿ ನಿರ್ಮಿಸಲು ಉದ್ದೇಶಿಸಿರುವ 2.47 ದಶಲಕ್ಷ ಲೀಟರ್ ಸಾಮರ್ಥ್ಯದ ಮಲಿನ ನೀರು ಶುದ್ದೀಕರಣ ಘಟಕಕ್ಕೆ ಅವಶ್ಯವಿರುವ 3 ಎಕರೆ 16 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಯುಕ್ತ ಸರ್ಕಾರದಿಂದ 6(1) ಅಧಿಸೂಚನೆಯನ್ನು ದಿನಾಂಕ 28–5–2009ರ ಗೆಜೆಟ್‌ನಲ್ಲಿ ಹೊರಡಿಸಲಾಗಿರುತ್ತದೆ. ಹಾಗೂ 10–2–2010ರಲ್ಲಿ ಅವಾರ್ಡ್ ಆಗಿರುತ್ತದೆ. ಈ ಸಂಬಂಧ ಭೂಸ್ವಾಧೀನ ವೆಚ್ಚ ರೂ. 6.30 ಲಕ್ಷವನ್ನು ಈಗಾಗಲೇ ಕಂದಾಯ ಇಲಾಖೆಗೆ ಪಾವತಿಸಲಾಗಿದೆ. ಸದರಿ ಜಮೀನಿನ ಮಾಲೀಕರು ಈ ಸಂಬಂಧ ಸಿವಿಲ್ ನ್ಯಾಯಾಧೀಶರು, (ಹಿರಿಯ ಶ್ರೇಣಿ) ಹಾಗೂ ಜೆಎಂಎಫ್‌ಸಿ, ನ್ಯಾಯಾಲಯ ತುರುವೇಕೆರೆಯಲ್ಲಿ ಹೆಚ್ಚಿನ ಪರಿಹಾರಕ್ಕಾಗಿ ಪ್ರಕರಣವನ್ನು ದಾಖಲಿಸಿರುವುದರಿಂದ ಕಂದಾಯ ಇಲಾಖೆಯಿಂದ ಇಲ್ಲಿಯವರೆಗೂ ಸದರಿ ಜಮೀನನ್ನು ಮಂಡಳಿಗೆ ಹಸ್ತಾಂತರಗೊಂಡಿರುವುದಿಲ್ಲ.

ಆ) ಮಲಿನ ನೀರಿನ ಶುದ್ಧೀಕರಣ ಘಟಕಕ್ಕೆ ಅವಶ್ಯವಿರುವ ಜಮೀನನ್ನು ಮಂಡಳಿಗೆ ಕಂದಾಯ ಇಲಾಖೆಯಿಂದ ಹಸ್ತಾಂತರಗೊಂಡ ನಂತರ ಗುತ್ತಿಗೆದಾರರನ್ನು ನೇಮಿಸಿ ಕಾಮಗಾರಿಯನ್ನು ಕೈಗೆತ್ತಿಗೊಳ್ಳಲಾಗುವುದು.

ಶ್ರೀ ಎಂ.ಟಿ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಹೆಚ್ಚಿನ ಪರಿಹಾರಕ್ಕಾಗಿ JMFC Court ಗೆ ಹೋಗಿದ್ದಾರೆ ಎಂದು ಉತ್ತರ ಕೊಟ್ಟಿದ್ದಾರೆ. ಬಹುಶ: ಇದು ಅಧಿಕಾರಿಗಳು ಮಾಡಿರುವಂತಹ ತಪ್ಪು. ಕಾರಣವೇನೆಂದರೆ, ಇವತ್ತು ನಾಲ್ಕು ಲಕ್ಷ ರೂಪಾಯಿಗೆ ಒಂದು ಗುಂಟೆ ಭೂಮಿಯಾಗಿದೆ. ನಾನು ಕಳೆದ ಬಾರಿ ಎಲ್ಲಾ ರೈತರನ್ನು ಕರೆಸಿ ಕೇಳಿದೆ. ಕೇವಲ 20 ಸಾವಿರ ರೂಪಾಯಿಗೆ ಒಂದು ಗುಂಟೆ ಜಮೀನನ್ನು agreement ಮಾಡಿಸಿಕೊಟ್ಟಿದ್ದೆ. ಅದನ್ನು ಸರ್ಕಾರದಿಂದ ತೆಗೆದುಕೊಂಡು ಬಂದ ತೀರ್ಮಾನದಲ್ಲಿ ಅವರು ಬಹುಶ: ಅಷ್ಟೇ ಗೌರವ ಕೊಟ್ಟು ಕೇವಲ 20 ಸಾವಿರ ರೂಪಾಯಿ ಒಂದು ಗುಂಟೆಗೆ ಕೊಟ್ಟಿದ್ದರೆ entire ಜಮೀನು ಇವತ್ತು ತೆಗೆದುಕೊಂಡು ಕೆಲಸ ಮಾಡಬಹುದಾಗಿತ್ತು. ಈಗಾಗಲೇ sanitation ಆಗಿ ಎರಡು ವರ್ಷಗಳಾಯಿತು. ಇನ್ನು connection ಕೊಟ್ಟಿಲ್ಲ. ಪೈಪ್ ಎಲ್ಲಾ waste ಆಗಿ ಹೋಗುತ್ತಿದೆ. ನಾನು ಮಾನ್ಯ ಸಚಿವರಲ್ಲಿ ಏನು

ಹೇಳುತ್ತೇನೆ ಎಂದರೆ, ಹಿಂದೆ ರೈತ ಏನು agreement ಮಾಡಿಕೊಂಡಿದ್ದಾನೆ, ಅವರನ್ನು ಕರೆದು immediate ಆಗಿ ಒಂದು Government Order ಮಾಡಿದರೆ ಬಹುಶ: ನಮಗೆ handover ಆಗುತ್ತದೆ. ಇಲ್ಲದೇ ಹೋದರೆ ಅಷ್ಟು ದುಡ್ಡು ಖರ್ಚು ಮಾಡಿ ಅಷ್ಟೊಂದು ಪ್ರಾಜೆಕ್ಟ್ ಮಾಡಿದರೆ waste ಆಗುತ್ತದೆ. ದಯಮಾಡಿ ಯಾವ ಅಧಿಕಾರಿಗಳು ತಮಗೆ ತಪ್ಪಾಗಿ ಮಾಹಿತಿ ನೀಡಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ. ಇಲ್ಲದಿದ್ದರೆ ಯಾವುದಕ್ಕೂ ಬೆಲೆ ಇರುವುದಿಲ್ಲ. ಕಷ್ಟಪಟ್ಟು ನಾವು ರೈತರ ಕೈಕಾಲು ಹಿಡಿದು ಕರೆದುಕೊಂಡು ಬಂದು ನಾವು agreement ಮಾಡಿಕೊಟ್ಟರೆ ಅದನ್ನು consent award ಮಾಡುವುದಕ್ಕೆ ಕಷ್ಟವಾದರೆ ಏನರ್ಥ? ದಯಮಾಡಿ ಅದಕ್ಕೆ ಕೂಡಲೇ ಅವರ ಮೇಲೆ action ತೆಗೆದುಕೊಳ್ಳಬೇಕು. Even court ನಲ್ಲಿದ್ದರೂ septic tank ಮಾಡಲಿಕ್ಕೆ ಏನೂ ತೊಂದರೆಯಿಲ್ಲ. 6(1) ಅವಾರ್ಡ್ ಆಗಿದೆ. ಆರು ಲಕ್ಷ 30 ಸಾವಿರ ದುಡ್ಡು deposit ಆಗಿದೆ. ಅವರಿಗೆ ಹೆಚ್ಚಿಗೆ ಬೇಕಾದರೆ ಕೋರ್ಟ್‌ಗೆ ಹೋಗಿ ತೆಗೆದುಕೊಳ್ಳಲಿ . . . .

(ಗೊಂದಲ)

ಅಧ್ಯಕ್ಷರು: ನೀವು ಪ್ರಶ್ನೆ ಕೇಳಿ ಎಂದರೆ, ಎಲ್ಲಾ explain ಮಾಡುತ್ತಿದ್ದೀರಿ. No, ಹೇಳುವ ಅಗತ್ಯವಿಲ್ಲ.

ಶ್ರೀ ಎಂ.ಟಿ.ಕೃಷ್ಣಪ್ಪ: Relief ಹೇಳಿ ಬಿಡುತ್ತೇನೆ.

ಅಧ್ಯಕ್ಷರು: ಹೇಳುವ ಅಗತ್ಯವಿಲ್ಲ. ನಿಮ್ಮ ಪ್ರಶ್ನೆ ಏನು? ಚರಂಡಿ ವಿಷಯವಾಗಿ ಪ್ರಶ್ನೆ ಕೇಳಿದ್ದೀರಿ. ಉತ್ತರ ಹೇಳಲಿ. Clarification ಇದ್ದರೆ ಆಮೇಲೆ ಕೇಳಿ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಬಹಳ ಸ್ಪಷ್ಟವಾಗಿ ಉತ್ತರಗಳನ್ನು ನಾವು ಒದಗಿಸಿದ್ದೇವೆ. ಈಗಾಗಲೇ 6(1) notification ಕೂಡ ಆಗಿ, 28.05.2009ರಲ್ಲಿ ಗೆಜೆಟ್‌ನಲ್ಲಿ ಕೂಡ ಇದು ಪ್ರಕಟವಾಗಿದೆ. 10.02.2010ರಲ್ಲಿ ಅವಾರ್ಡ್ ಆಗಿ ಸುಮಾರು ರೂ.6.30 ಲಕ್ಷವನ್ನು ಈಗಾಗಲೇ ಕಂದಾಯ ಇಲಾಖೆಗೆ ಪಾವತಿಸಲಾಗಿದೆ. ತಾವು ಈಗ ಏನೋ

ಕೇಳುತ್ತೀರಿ, ಹೆಚ್ಚಿನ ಪರಿಹಾರ ಅವರು ಕೇಳುತ್ತಿದ್ದಾರೆ ಎಂದು ಹೇಳುತ್ತಿದ್ದೀರಿ. ಈಗಾಗಲೇ ಅವಾರ್ಡ್ ಆಗಿರುವುದರಿಂದ ಮತ್ತು ಪ್ರಕರಣ ನ್ಯಾಯಾಲಯದ ಮುಂದೆ ಇರುವುದರಿಂದ ನಾವು ನ್ಯಾಯಾಲಯದ ತೀರ್ಪನ್ನು ಎದುರು ನೋಡುತ್ತೇವೆ.

ಶ್ರೀ ಎಂ.ಟಿ.ಕೃಷ್ಣಪ್ಪ: ರೈತರು consent ಕೊಟ್ಟಿದ್ದಾರೆ. ಒಂದು ಗುಂಟೆಗೆ 20 ಸಾವಿರ ರೂಪಾಯಿಗಳ consent ಆಗಿ ರೈತರು ಈಗಾಗಲೇ ಕೊಟ್ಟಾಗಿದೆ. ನೀವು ಅದನ್ನು approve ಮಾಡಿದರೆ ಸಾಕಾಗುತ್ತದೆ. ಹಾಗಾಗಿ ನೀವು approve ಮಾಡದೇ ಇರುವುದರಿಂದ ಮೂರು ಸಾವಿರ ರೂಪಾಯಿ ಗುಂಟೆ ಮಾಡಿದ್ದೀರಿ. ನಾಲ್ಕು ಲಕ್ಷ ಒಂದು ಗುಂಟೆಗೆ ಇರುವಾಗ ಮೂರು ಸಾವಿರ ರೂಪಾಯಿ ಮಾಡಿದರೆ ಯಾರು ಒಪ್ಪುತ್ತಾರೆ ಮಾನ್ಯ ಸುರೇಶ್ ಕುಮಾರ್‌ರವರೇ?

ಅಧ್ಯಕ್ಷರು: ಕೋರ್ಟ್‌ನಲ್ಲಿ ಇರುವುದನ್ನು ಹೇಗೆ ಮಾಡುವುದಕ್ಕೆ ಆಗುತ್ತದೆ?

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಕೃಷ್ಣಪ್ಪನವರು ಏನು ಹೇಳಿದ್ದಾರೆ, ಅದನ್ನು ಗಮನದಲ್ಲಿಟ್ಟುಕೊಂಡು ತುರುವೇಕೆರೆಗೆ ಏನು ಬಹಳ ಅಗತ್ಯವಾಗಿ ಈ ಒಂದು ಒಳಚರಂಡಿ ವ್ಯವಸ್ಥೆ ಮತ್ತು septic tank ಮಾಡಬೇಕು. ಅದಕ್ಕೋಸ್ಕರ ಜಿಲ್ಲಾಧಿಕಾರಿಗಳ ಮುಖಾಂತರ ಒಂದು consent award ಅನ್ನು ಕೂಡ ನಾವು ಪ್ರಯತ್ನಿಸಿ ಒಂದು ಪರಿಹಾರಕ್ಕೆ ಬರುವುದಕ್ಕೆ ಪ್ರಯತ್ನಿಸುತ್ತೇವೆ.

ಅಧ್ಯಕ್ಷರು: ಆಯಿತು.

ಶ್ರೀ ಎಂ.ಟಿ.ಕೃಷ್ಣಪ್ಪ: ಕೋರ್ಟ್ ಕೆಲಸ ಮಾಡುವುದಕ್ಕೆ ಏನೂ stay ಕೊಟ್ಟಿಲ್ಲ.

ಶ್ರೀ ಎಸ್.ಸುರೇಶ್ ಕುಮಾರ್: ನೀವು ಲ್ಯಾಂಡ್‌ಅನ್ನು handover ಮಾಡಿಸಿ ನಾವು ಮಾಡುತ್ತೇವೆ.

ಶ್ರೀ ಎಂ.ಟಿ.ಕೃಷ್ಣಪ್ಪ: ತೆಗೆದುಕೊಳ್ಳಿ ಸಾರ್. ಅದು 6(1) ಆದಮೇಲೆ ಅದು handover ತಾನೇ? 6(1) ಆಗಿದೆ ಸಾರ್. ತೆಗೆದುಕೊಂಡು ಕೆಲಸ ಮಾಡಬಹುದು. ಅದಕ್ಕೆ ಏನೂ ತೊಂದರೆಯಿಲ್ಲ ಸುರೇಶ್ ಕುಮಾರ್‌ರವರೆ.

ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರುವ ಕೆರೆಗಳ ಅಭಿವೃದ್ಧಿ

97(195) ಶ್ರೀ ಎಸ್. ಮುನಿರಾಜು (ದಾಸರಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು;

ಆ) ಈ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ಯಾವ ಯಾವ ಕೆರೆಗಳನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆ; (ವಿವರ ನೀಡುವುದು)

ಈ) ಉಳಿದಿರುವ ಕೆರೆಗಳನ್ನು ಯಾವ ಅವಧಿಯಲ್ಲಿ ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು?

ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು)

ಅ) 183

ಆ) ಹೌದು

ಇ) ಈ ಕೆಳಕಂಡಂತೆ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

1) ಬಿ.ಡಿ.ಎ ವತಿಯಿಂದ ಒಟ್ಟು 43 ಕೆರೆಗಳು

2) ಅರಣ್ಯ ಇಲಾಖೆ ವತಿಯಿಂದ ಒಟ್ಟು 5 ಕೆರೆಗಳು

3) ಕೆರೆ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ 11 ಕೆರೆಗಳು

4) ಬಿ.ಬಿ.ಎಂ.ಪಿ. ವತಿಯಿಂದ 19 ಕೆರೆಗಳು

ಇವುಗಳ ವಿವರವನ್ನು ಅನುಬಂಧದಲ್ಲಿ ನೀಡಿದೆ.

ಈ) ಉಳಿದ ಕೆರೆಗಳನ್ನು ಹಂತ ಹಂತವಾಗಿ 2014–15ನೇ ಸಾಲಿನೊಳಗೆ ಸಮಗ್ರವಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.